# ಎನ್ಐಟಿಕೆಯಲ್ಲಿ ವಿದ್ಯುಗ್-2.2 ಬೈಕ್ ಉದ್ಘಾಟನೆ



**ಸುರತ್ಕಲ್:** ಸಿಡಿಎಸ್ ಎನ್ಐಟಿಕೆ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿದ ಎನ್ಐಟಿಕೆ ವಿದ್ಯುಗ್ 2.2 ಬಹು ಬಳಕೆಯ ಕನ್ವರ್ಟಿಬಲ್ ದ್ವಿಚಕ್ರ ವಾಹನ ಇ ಬೈಕ್ ವಾಹನವನ್ನು ಗುರುವಾರ ಸಂಸ್ಥೆಯಲ್ಲಿ ಉದ್ಘಾಟನೆಗೊಳಿಸಲಾಯಿತು.

ಇದು ಸಿಎನ್ಎನ್ (ಕಾರ್ಬನ್ ನ್ಯೂಟ್ರಲ್ ಎನ್ಐಟಿಕೆ)ನಿರ್ಮಿಸುವ ಉದ್ದೇಶದ ಭಾಗವಾಗಿದೆ. ಇದನ್ನು ಸಂಸ್ಥೆಯ ರೆಸಿಡೆಂಟ್ ಎಂಜಿನಿಯರ್ ಕಚೇರಿ ಸಿಬ್ಬಂದಿ ಬಳಕೆಗೆ, ಬೋಧಕೇತರ ಸಿಬ್ಬಂದಿ ಬಳಕೆಗೆ ನೀಡಲು ಉದ್ದೇಶಿಸಲಾಗಿದೆ.

ಸಿಎಸ್‌ಡಿ ಸಂಯೋಜಕ ಡಾ. ಪೃಥ್ವಿರಾಜ್, ಡಾ. ಕೆ.ವಿ. ಗಂಗಾಧರನ್, ಐಟಿ ಇಂಟಿಗ್ರೇಟರ್ ಡಾ. ಮೋಹಿತ್ ಪಿ. ತಹಿಲಿಯಾನಿ, ಹೆಚ್ಚುವರಿ ನಿರ್ದೇಶಕ ಡಾ. ಕೃಷ್ಣ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಎನ್ಐಟಿಕೆ ಹಳೆ ವಿದ್ಯಾರ್ಥಿಗಳ ಸಂಘದ ಮುಂಬಯಿ ಘಟಕ ಇದನ್ನು ಪ್ರಾಯೋಜಿಸಿದೆ.

Vijaya Karnataka, Date: 15/10/22. p,no - Sudina - IV (04)